


# ಜಾಗತಿಕ ಕೌಶಲ್ಯ ಪ್ರದರ್ಶನದ ರಾಷ್ಟ್ರೀಯ ಮಟ್ಟದ ಇಂಡಿಯಾ ಸ್ಕಿಲ್ಸ್ -2021

**24**
**ಪದಕಗಳನ್ನು ಮುಡಿಗೇರಿಸಿಕೊಂಡ ಕರ್ನಾಟಕ**

ಅದ್ಭುತ ಕೌಶಲ್ಯ, ಪ್ರತಿಭೆ ಮತ್ತು ಏಕಾಗ್ರತೆಯ ಪ್ರದರ್ಶನದಿಂದ ದೆಹಲಿಯಲ್ಲಿ ನಡೆದ ಜಾಗತಿಕ ಕೌಶಲ್ಯ ಪ್ರದರ್ಶನದ ರಾಷ್ಟ್ರೀಯ ಮಟ್ಟದ ಇಂಡಿಯಾ ಸ್ಕಿಲ್ಸ್ – 2021ರ ಸ್ಪರ್ಧೆಯಲ್ಲಿ ಕರ್ನಾಟಕ ರಾಜ್ಯವು ಭಾಗವಹಿಸಿ ಒಟ್ಟು 24 ಪದಕಗಳನ್ನು ಮುಡಿಗೆ ಹಾಕಿಕೊಳ್ಳುವ ಮೂಲಕ ದಾಖಲೆ ಸೃಷ್ಟಿಸಿದೆ.

ರಾಷ್ಟ್ರ ರಾಜಧಾನಿಯಲ್ಲಿ ಇದೇ ತಿಂಗಳ 07 ರಿಂದ 09 ರವರೆಗೆ ಒಟ್ಟು ಮೂರು ದಿನಗಳ ಕಾಲ ನಡೆದ ಸ್ಪರ್ಧೆಯಲ್ಲಿ ರಾಜ್ಯದಿಂದ 35 ಸ್ಪರ್ಧಿಗಳು ಭಾಗವಹಿಸಿದ್ದು, ತಲಾ 8 ಸ್ವರ್ಣ ಮತ್ತು ಬೆಳ್ಳಿ, 4 ಕಂಚು ಮತ್ತು ಉತ್ಕೃಷ್ಟತಾ ವಿಭಾಗದಲ್ಲಿ 4 ಪದಕಗಳನ್ನು ಗೆದ್ದಿದ್ದಾರೆ.

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು (KSDC) ಜಿಲ್ಲಾ ಮಟ್ಟ, ಪ್ರಾಂತೀಯ ಮಟ್ಟ ಹಾಗೂ ರಾಜ್ಯ ಮಟ್ಟದಲ್ಲಿ ಸ್ಪರ್ಧೆಗಳನ್ನು

ಏರ್ಪಡಿಸಿ ಅದರಲ್ಲಿ ವಿಜೇತರಾದ ಸ್ಪರ್ಧಿಗಳನ್ನು ದಕ್ಷಿಣ ಪ್ರಾಂತೀಯ ಸ್ಪರ್ಧೆಗೆ ಆಯ್ಕೆಮಾಡಿತು. ಡಿಸೆಂಬರ್ 1 ರಿಂದ 4 ರವರೆಗೆ ವಿಶಾಖ ಪಟ್ಟಣಂನಲ್ಲಿ ಆಯೋಜಿಸಿದ್ದ ಪ್ರಾಂಥಿಯ ಸ್ಪರ್ಧೆಯಲ್ಲಿ ಆಯ್ಕೆಯಾದ 35 ಸ್ಪರ್ಧಿಗಳಿಗೆ ನಿಗಮವು ಉದ್ಯೋಗ ಪಾಲುದಾರರ ಸಹಯೋಗದೊಂದಿಗೆ ವಿಶೇಷ ತರಬೇತಿ ನೀಡಿ ಅವರನ್ನು ರಾಷ್ಟ್ರ ಮಟ್ಟದ ಸ್ಪರ್ಧೆಗೆ ಸಜ್ಜುಗೊಳಿಸಿತು.

ಭಾರತ ಸರ್ಕಾರದ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಮಂತ್ರಾಲಯ ಅಡಿಯಲ್ಲಿ ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮವು (NSDC) ರಾಷ್ಟ್ರೀಯ ಮಟ್ಟದ ಇಂಡಿಯಾ ಸ್ಕಿಲ್ಸ್ ಸ್ಪರ್ಧೆಯನ್ನು ಪ್ರತಿ ವರ್ಷ ಆಯೋಜಿಸುತ್ತದೆ. ಇದರಲ್ಲಿನ ಇಂಡಿಯಾ ಸ್ಕಿಲ್ಸ್ ಸ್ಪರ್ಧೆಯು ದೇಶದ ಅತ್ಯಂತ ದೊಡ್ಡ ಕೌಶಲ್ಯ ಸ್ಪರ್ಧೆಯಾಗಿದ್ದು, 2021 ರಲ್ಲಿ ದೇಶದ 26 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶದಿಂದ 500 ಸ್ಪರ್ಧಿಗಳು ಭಾಗವಹಿಸಿದ್ದರು.

ನಿಗಮದಡಿ ಏರ್ಪಡಿಸಿದ್ದ ಒಳಾಂಗಣ ಕ್ರೀಡಾಂಗಣ ಸ್ಪರ್ಧೆಗಳಾದ ಕಾಂಕ್ರೀಟ್ ನಿರ್ಮಾಣ ಕೆಲಸ, ಬ್ಯೂಟಿ ಥೆರಪಿ, ಕಾರ್ ಪೇಂಟಿಂಗ್, ಆರೋಗ್ಯ ಮತ್ತು ಸಾಮಾಜಿಕ ಕಾಳಜಿ, ದೃಶ್ಯ ವಾಣಿಜ್ಯೀಕರಣ, ಗ್ರಾಫಿಕ್ಸ್ ವಿನ್ಯಾಸ ತಂತ್ರಜ್ಞಾನ, ವಾಲ್ ಅಂಡ್ ಫ್ಲೋರ್ ಟೈಲಿಂಗ್, ವೆಲ್ಡಿಂಗ್ ಸೇರಿದಂತೆ ವಿವಿಧ 54 ಕೌಶಲ್ಯಗಳಲ್ಲಿ ಅಭ್ಯರ್ಥಿಗಳು ಭಾಗವಹಿಸಿದ್ದರು.

ಸ್ಪರ್ಧೆಯಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದವರ ಪೈಕಿ ಫರಾನ್ ರಾಜಾ ಪಾಂಥೋಜಿ (ಸಿಎನ್‌ಸಿ ಮಿಲ್ಲಿಂಗ್), ರಾಘವೇಂದ್ರ (ಮೆಕಾನಿಕಲ್ ಇಂಜಿನಿಯರಿಂಗ್), ಗಣೇಶ್ ಇರ್ಕಲ್ (ಪ್ಲಾಸ್ಟಿಕ್ ಡೈ ಎಂಜಿನಿಯರಿಂಗ್), ಕಾರ್ತಿಕ್ ಗೌಡ.ಎಸ್.ಎನ್ (ಮೆಕಾಟ್ರೋನಿಕ್ಸ್), ಅಕಿಲೇಶ್.ಎನ್ (ಮೆಕಾಟ್ರೋನಿಕ್ಸ್), ಲಿಖಿತ್ ಕುಮಾರ್. ವೈ.ಪಿ (ಪ್ರೋಟೊ ಟೈಪ್ ಮಾಡಲಿಂಗ್) ಹಾಗೂ ಯೋಗದಲ್ಲಿ ಜಾನವಿ.ಆರ್ ಅವರು ಸ್ವರ್ಣ ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಪ್ರಥೇಮ್ ಶರ್ಮ (ಬೇಕರಿ), ಭುವನೇಶ್.ಪಿ (ಕ್ಲೌಡ್ ಕಾಂಪ್ಯೂಟಿಂಗ್), ಕಾವ್ಯ.ಆರ್.ವೈ (ಸಿಎನ್‌ಸಿ ಟರ್ನಿಂಗ್), ಸ್ಟಿವನ್ ಹ್ಯಾರೀಸ್.ಆರ್ (ಗ್ರಾಫಿಕ್ಸ್ ವಿನ್ಯಾಸ ತಂತ್ರಜ್ಞಾನ), ದಿಬಯೆಂದು ಬಾಲ (ಜ್ವೆಲ್ಲರಿ), ಜಸ್ಟಿನ್ ಕ್ರಿಸ್ತೋಫರ್.ಆರ್ (ಮೆಕಾನಿಕಲ್ ಇಂಜಿನಿಯರಿಂಗ್ ಸಿಎಡಿ) ನಂದಿತಾ ಸಕ್ಸೆನಾ (ಪ್ಯಾಟಿಸೆರಿ & ಕಾನ್ಫೆಕ್ಷನರಿ), ನಿಶೋಕ್.ಜಿ (ಪ್ಲಾಸ್ಟಿಕ್ ಡೈ ಇಂಜಿನಿಯರಿಂಗ್) ಅವರು ಚಿನ್ನದ ಪದಕಗಳನ್ನು ಪಡೆದುಕೊಂಡಿದ್ದಾರೆ.

ಗಿರಿಧರ್ ಕುಮಾರ್.ಎಂ (ಅಡಿಟಿವ್ ಮ್ಯಾನುಫ್ಯಾಕ್ಚರಿಂಗ್), ವಿಜಯ್ ಕುಮಾರ್.ಎಂ (ಹೇರ್ ಡ್ರಸಿಂಗ್), ಕಿಶೋರ್.ಎಸ್ (ಇಂಡಸ್ಟ್ರೀಯಲ್ ಕಂಟ್ರೋಲ್), ಮಹೇಶ್ ಗುರ್ಜರ್ (ಇಂಡಸ್ಟ್ರಿ 4.0) ಅವರು ಕಂಚಿನ ಪದಕಗಳನ್ನು ಹಾಗೂ ಹರೀಶ್.ಎಸ್. ಹಿಂದಸಗೇರಿ (ಅಡಿಟಿವ್ ಮ್ಯಾನುಫ್ಯಾಕ್ಚರಿಂಗ್), ಸುಬಿನ್ ಕುಮಾರ್ (ಜಾಯ್‌ನರಿ), ಸಿದ್ದಿ ಶರ್ಮಾ (ದೃಶ್ಯ ವಾಣಿಜ್ಯೀಕರಣ), ಸುಪ್ರಿತ.ಎಸ್ (ನೀರಿನ ತಂತ್ರಜ್ಞಾನ) ಅವರು ಉತ್ಕೃಷ್ಟತಾ ವಿಭಾಗದಲ್ಲಿ ಪದಕಗಳನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.

ಸ್ಪರ್ಧೆಯಲ್ಲಿ ಭಾಗವಹಿಸಿದ್ದ 150ಕ್ಕೂ ಹೆಚ್ಚು ಅಭ್ಯರ್ಥಿಗಳನ್ನು NSDC ಕಾರ್ಯದರ್ಶಿ ಶ್ರೀ ರಾಜೇಶ್ ಅಗರ್‌ವಾಲ್ ಸನ್ಮಾನಿಸಿದರು.

ರಾಷ್ಟ್ರೀಯ ಮಟ್ಟದ ಇಂಡಿಯಾ ಸ್ಕಿಲ್ಸ್-2021ರ ಸ್ಪರ್ಧೆಯಲ್ಲಿ ವಿಜೇತರಾದವರು ಇದೇ ವರ್ಷದ ಅಕ್ಟೋಬರ್ ತಿಂಗಳಲ್ಲಿ ಚೀನಾ ದೇಶದ ಶಾಂಘೈನಲ್ಲಿ ನಡೆಯಲಿರುವ ವರ್ಲ್ಡ್ ಸ್ಕಿಲ್ಸ್ ಅಂತರಾಷ್ಟ್ರೀಯ ಸ್ಪರ್ಧೆಯಲ್ಲಿ ದೇಶವನ್ನು ಪ್ರತಿನಿಧಿಸಿ ಭಾಗವಹಿಸುವ ಅವಕಾಶವನ್ನು ಪಡೆದುಕೊಳ್ಳಲಿದ್ದಾರೆ.

ಡಾ. ಸಿ.ಎನ್ ಅಶ್ವಥ್ ನಾರಾಯಣ, ಸನ್ಮಾನ್ಯ ಸಚಿವರು, ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ ಮತ್ತು ಎಸ್&ಟಿ, ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಅವರು ವಿಜೇತರನ್ನು ಶ್ಲಾಘಿಸಿ ಮುಂಬರುವ ಜಾಗತಿಕ ಕೌಶಲ್ಯ ಸ್ಪರ್ಧೆಯಲ್ಲಿ ಭಾಗವಹಿಸುವ ಅಭ್ಯರ್ಥಿಗಳು ಯಶಸ್ವಿಯಾಗಲೆಂದು ಆಶಿಸಿದರು.

ಡಾ.ಎಸ್. ಸೆಲ್ವಕುಮಾರ್, ಭಾ.ಆ.ಸೇ., ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆ ರವರು ಸ್ಪರ್ಧಿಗಳನ್ನು ಅಭಿನಂದಿಸಿ ಮುಂಬರುವ ಜಾಗತಿಕ ಕೌಶಲ್ಯ ಸ್ಪರ್ಧೆಯಲ್ಲಿ ಭಾಗವಹಿಸುವ ಅಭ್ಯರ್ಥಿಗಳು ಇರುವ ಸಮಯವನ್ನು ಸದುಪಯೋಗ ಪಡಿಸಿಕೊಂಡು ಹೆಚ್ಚಿನ ಯಶಸ್ಸನ್ನು ಕಾಣಬೇಕು ಎಂದು ತಿಳಿಸಿದರು.




# Karnataka win 24 medals at World Skills Competition – National Level

***The India Skills Competition is the largest skill competition in the country with over 500 competitors from 26 states and Union Territories.***

Karnataka has set a record of 24 medals in the India Skills -2021 Competition at the National Skill Exhibition, which concluded on Monday in Delhi with an impressive display of Talent, Skills and Concentration.

Karnataka participated and won 8 Gold, 8 Silver, 4 Bronze and 4 Medallion of excellence in the high-performance category that were held in Delhi from January 7 to 9.

The competition was organized by the National Skill Development Corporation under the Ministry of Skill Development and Entrepreneurship, Government of India. The India Skills Competition is the largest skill competition in the country with over 500 competitors from 26 states and Union Territories.

Karnataka Skill Development Corporation (KSDC) has conducted District Level, Zonal Level and State Level Competitions to choose the participants.

The South Regional Competition was held inVisakhapatnam, Andhra Pradesh from 1st to 4th December. A total of 35 participants won Regional Level all these were given High Intensity Training in their respective Skills in consultation with Industry Partners by Karnataka Skill Development Corporation (KSDC).

The closed-door competition organized by National Skill Development Corporation witnessed participation in 54 skills such as concrete construction work, health and social care, visual merchandising, graphic design technology, wall and floor tilling, welding and among others.

Those who represented the state in the competition like Farhan Raza Pantoji (CNC Milling), Ragavendra (Mechanical Engineering CAD), Ganesh R Irkal (Plastic Die Engineering) and Karthik Gowda S.N (Mechatronics), Akhilesh N (Mechatronics), Likith Kumar Y.P (Prototype Modelling), Jahnavi R (Yoga) won Gold medals.

Prathem Sharma (Bakery), Bhuvanesh P (Cloud Computing), Kavya R.Y (CNC Turning), Steven Harris R (Graphic Design Technology), DibyenduBala (Jewellery), Justin Christopher R (Mechanical Engineering CAD), Nandita Saxena (Patisserie And Confectionery), NISHOK G (Plastic Die Engineering) won Silver medals.

Giridhar R Kulkarni (Additive Manufacturing), Vijay Kumar M (Hairdressing), Kishore S (Industrial Control), Mahesh Gurjar (Industry 4.0) won Bronze medals and 4 participants won Medallion at National Level of World Skill Competition.

More than 150 participants were felicitated by NSDE Secretary Shri. Rajesh Aggarwal, Government of India.

The winners of India skills 2021 Nationals will get a chance to represent the country at World Skills International Competition to be held in Shanghai, China, in October this year.

Dr. Ashwath Narayan.C.N, Honourable Minister for IT, BT, S&T and Skill Development, congratulated the winners and wished them success at the World Skills Competition to be held in Shanghai.

Dr. S Selvakumar, IAS, Principal Secretary to Government of Karnataka, Skill Development and Entrepreneurship and Livelihood, while Congratulating the winners said “I wish participants will utilize the time to further strengthen their Skill before the World Skills Competition and bring more laurels to the state of Karnataka.”